## ವಿದೇಶ ವಾರ್ತೆ

- ಮಾಜಿ ರಾಷ್ಟ್ರಪತಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಮುಂದಿನ ವಾರ ಓಮನ್‌ಗೆ ಭೇಟಿ ನೀಡಲಿದ್ದಾರೆ
- ಬೇಡಿಕೆ ಪೂರೈಸಲು ನೇಪಾಳ ಸರ್ಕಾರಕ್ಕೆ ಮಾಜಿ ಅಧ್ಯಕ್ಷ ಪ್ರಚಂಡ ಅವರಿಂದ 7 ದಿನಗಳ ಗಡುವು
- ಭಾರತೀಯ ವಿದ್ಯಾರ್ಥಿಗಳ ರಕ್ಷಣೆಗೆ ಆಸ್ಟ್ರೇಲಿಯಾದ ವಿಕ್ಟೋರಿಯಾ ರಾಜ್ಯ ಸರ್ಕಾರದಿಂದ ಹೊಸ ಕಾನೂನು

# ಪಾಕಿಸ್ತಾನ ಗುಪ್ತಚರ ಸಂಸ್ಥೆ ಐಎಸ್‌ಐಗೆ ಉಗ್ರರ ಬಾಂಬ್

- ಭಯೋತ್ಪಾದನೆಗೆ ಕುಮ್ಮಕ್ಕು ನೀಡಿದ ಸಂಸ್ಥೆಯ ಮೇಲೇ ದಾಳಿ
- ಕನಿಷ್ಠ 20 ಜನರ ಸಾವು; ಅನಿರ್ದಿಷ್ಟಾವಧಿ ನಿಷೇಧಾಜ್ಞೆ ಜಾರಿ



*ಸ್ಫೋಟ ಸಂಭವಿಸಿದ ಐಎಸ್‌ಐ ಕಚೇರಿಯಲ್ಲಿ ರಕ್ಷಣಾ ಕಾರ್ಯ ನಡೆಸುತ್ತಿರುವುದು.*

**ಇಸ್ಲಾಮಾಬಾದ್:** ಹಲವು ವರ್ಷಗಳಿಂದ ಭಯೋತ್ಪಾದಕರಿಗೆ ಬೆಂಬಲ ನೀಡುತ್ತಲೇ ಬಂದಿರುವ ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐನ ಕಚೇರಿಯ ಮೇಲೆಯೇ ಈಗ ಉಗ್ರರು ಬಾಂಬ್ ದಾಳಿ ನಡೆಸಿದ್ದಾರೆ. ಪೇಶಾವರದಲ್ಲಿರುವ ಐಎಸ್‌ಐ ಕೇಂದ್ರ ಕಚೇರಿ ಮೇಲೆ ಮತ್ತು ಬನ್ನು ಜಿಲ್ಲೆಯ ಪೊಲೀಸ್ ಠಾಣೆಯೊಂದರ ಮೇಲೆ ಉಗ್ರರು ಶುಕ್ರವಾರ ಆತ್ಮಾಹುತಿ ದಾಳಿ ನಡೆಸಿದ್ದು, 20 ಮಂದಿ ಬಲಿಯಾಗಿದ್ದಾರೆ.

■ **ಬೆಂಬಲಿಸಿದವರಿಗೇ ಬಾಂಬ್:** ಶುಕ್ರವಾರ ಮುಂಜಾನೆ 6.40ರ ಸುಮಾರಿಗೆ ಆತ್ಮಾಹುತಿ ದಾಳಿಕೋರನೊಬ್ಬ 200 ಕೆ.ಜಿ. ಸ್ಫೋಟಕಗಳನ್ನು ತುಂಬಿದ್ದ ಕಾರನ್ನು ಐಎಸ್‌ಐ ಕಚೇರಿಯೊಳಗೆ ನುಗ್ಗಿಸಿ ಸ್ಫೋಟಿಸಿದ. ಪರಿಣಾಮ 7 ಐಎಸ್‌ಐ ಸಿಬ್ಬಂದಿ ಸೇರಿ 12 ಮಂದಿ ಸಾವನ್ನಪ್ಪಿದ್ದು, 60ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಘಟನೆಯಿಂದಾಗಿ, ಉಗ್ರರನ್ನು ಪೋಷಿಸಿ ಬೆಳೆಸಿದ್ದ ಐಎಸ್‌ಐಗೆ ಮೈ ಪರಚಿಕೊಳ್ಳುವಂತಾಗಿದೆ. ಈ ಘಟನೆ ನಡೆದ 1 ಗಂಟೆ ಬಳಿಕ ಬನ್ನು ಜಿಲ್ಲೆಯ ಬಕಾಖೇಲ್ ಪೊಲೀಸ್ ಠಾಣೆಯ ಮೇಲೂ ಆತ್ಮಾಹುತಿ ದಾಳಿ ನಡೆದಿದ್ದು, 8 ಮಂದಿ ಬಲಿಯಾಗಿದ್ದಾರೆ. 25ಕ್ಕೂ ಅಧಿಕ ಮಂದಿಗೆ ಗಾಯಗಳಾಗಿವೆ. ಆದಾಗ್ಯೂ, ಈ ದಾಳಿಗಳ ಹೊಣೆಯನ್ನು ಯಾವುದೇ ಉಗ್ರ ಸಂಘಟನೆ ಹೊತ್ತುಕೊಂಡಿಲ್ಲ. ಈ ಮಧ್ಯೆ, ಸ್ಫೋಟದ ಹಿನ್ನೆಲೆಯಲ್ಲಿ ಅನಿರ್ದಿಷ್ಟಾವಧಿ ನಿಷೇಧಾಜ್ಞೆ ಜಾರಿ ಮಾಡಲಾಗಿದೆ.

## ಲಂಕಾ: ರಾಜಪಕ್ಸೆಗೆ ಫೊನ್ಸೇಕಾ ಸಡ್ಡು?



**ಕೊಲಂಬೋ:** ಶ್ರೀಲಂಕಾ ಅಧ್ಯಕ್ಷ ಮಹಿಂದಾ ರಾಜಪಕ್ಸೆ ಅವರನ್ನು ಸೇನೆಯ ಮಾಜಿ ಮುಖ್ಯಸ್ಥ ಶರತ್ ಫೊನ್ಸೇಕಾ ಪದಚ್ಯುತಗೊಳಿಸಲಿದ್ದಾರೆಯೆ? ಹೀಗೊಂದು ಚರ್ಚೆ ಈಗ ಶುರುವಾಗಿದೆ. ಗುರುವಾರವಷ್ಟೇ ಸೇನಾ ಮುಖ್ಯಸ್ಥರ ಹುದ್ದೆಗೆ ರಾಜೀನಾಮೆ ನೀಡಿರುವ ಫೊನ್ಸೇಕಾ ರಾಜಕೀಯಕ್ಕೆ ಧುಮುಕಲಿದ್ದು, ಮುಂದಿನ ಏಪ್ರಿಲ್‌ನಲ್ಲಿ ನಡೆಯಲಿರುವ ಅಧ್ಯಕ್ಷೀಯ ಚುನಾವಣೆಯಲ್ಲಿ ಸ್ಪರ್ಧಿಸಲಿದ್ದಾರೆ. ಈ ಮಧ್ಯೆ, ಎಲ್‌ಟಿಟಿಇ ಜೊತೆಗಿನ ಹೋರಾಟದ ಸಂದರ್ಭ ಗೆಳೆಯರಾಗಿದ್ದ ರಾಜಪಕ್ಸೆ, ಫೊನ್ಸೇಕಾ ಸಂಬಂಧ ಬಿರುಕು ಬಿಟ್ಟಿದೆ ಎನ್ನಲಾಗುತ್ತಿದೆ. ಇದಕ್ಕೆ ಸಾಕ್ಷಿ ಎಂಬಂತೆ, ತಾವು ರಾಜಪಕ್ಸೆ ವಿರುದ್ಧ ಸಿಪಾಯಿ ದಂಗೆ ನಡೆಸಬಹುದು ಎಂಬ ಭೀತಿಯಿಂದ ತಮ್ಮನ್ನು ಸೇನಾ ಮುಖ್ಯಸ್ಥರ ಹುದ್ದೆಯಿಂದ ಕೆಳಗಿಳಿಸಲಾಗಿದೆ ಎಂದು ಶುಕ್ರವಾರ ಫೊನ್ಸೇಕಾ ದೂರಿದ್ದಾರೆ.

## ಬ್ರಿಟನ್ ವೀಸಾ ಪಡೆಯೋದು ಇನ್ನು ಕಠಿಣ

**ಲಂಡನ್:** ಬ್ರಿಟನ್ನಿನ ವಲಸೆ ವೀಸಾ ಪಡೆಯುವುದು ಇನ್ನು ಕ್ಲಿಷ್ಟವಾಗಲಿದೆ. ಈ ಸಂಬಂಧ ಮಸೂದೆಗೆ ತಿದ್ದುಪಡಿ ತರುವ ಪ್ರಸ್ತಾಪವನ್ನು ಬ್ರಿಟನ್ ಸಂಸತ್ತು ಮುಂದಿಟ್ಟಿದ್ದು, ಇದರ ಪ್ರಕಾರ ಐರೋಪ್ಯೇತರ ದೇಶಗಳ ನೌಕರರು ಮತ್ತು ವಿದ್ಯಾರ್ಥಿಗಳು ಬ್ರಿಟನ್ ವೀಸಾ ಪಡೆಯುವುದು ಕಷ್ಟ. ಐರೋಪ್ಯೇತರ ದೇಶಗಳ ವೈದ್ಯರು, ಎಂಜಿನಿಯರ್‌ಗಳು ಮತ್ತು ಅಲ್ಪಾವಧಿ ಶಿಕ್ಷಣಕ್ಕೆ ಬರುವ ವಿದ್ಯಾರ್ಥಿಗಳಿಗೆ ಬ್ರಿಟನ್ ಪ್ರವೇಶ ಇಲ್ಲ ಎಂದು ಪ್ರಧಾನಿ ಗಾರ್ಡನ್ ಬ್ರೌನ್ ಗುರುವಾರ ಹೇಳಿದ್ದರು.

## ಅಣುಬಾಂಬ್: ಪಾಕ್‌ಗೆ ಚೀನಾ ನೆರವಿತ್ತು



**ವಾಷಿಂಗ್ಟನ್:** ಅಣುಬಾಂಬ್ ತಯಾರಿಸಲು ಅಗತ್ಯವಿರುವ ಯುರೇನಿಯಂ ಅನ್ನು ಚೀನಾ 1982ರಲ್ಲಿ ಪಾಕಿಸ್ತಾನಕ್ಕೆ ಒದಗಿಸಿತ್ತು ಎಂಬ ಅಂಶ ಬಹಿರಂಗಗೊಂಡಿದೆ. ಪಾಕಿಸ್ತಾನದ ವಿವಾದಿತ ಅಣು ವಿಜ್ಞಾನಿ ಎ.ಕ್ಯು. ಖಾನ್ ಪಾಕ್ ಗುಪ್ತಚರ ಇಲಾಖೆಗೆ ಕಳುಹಿಸಲು ಬರೆದಿಟ್ಟಿದ್ದ 11 ಪುಟಗಳ ವರದಿ ಈಗ ಬಹಿರಂಗಗೊಂಡಿದ್ದು, ಅದರಲ್ಲಿ ಈ ಅಂಶವೂ ಇದೆ ಎಂದು ವಾಷಿಂಗ್ಟನ್ ಪೋಸ್ಟ್ ಹೇಳಿದೆ. ಅಂದಿನ ಚೀನಾ ಸರ್ವಾಧಿಕಾರಿ ಮಾವೋ ಜೆದಾಂಗ್ ಮತ್ತು ಪಾಕ್ ಅಧ್ಯಕ್ಷ ಜುಲ್ಫಿಕರ್ ಅಲಿ ಭುಟ್ಟೋ ಮಧ್ಯೆ ನಡೆದಿದ್ದ ರಹಸ್ಯ ಅಣು ಒಪ್ಪಂದದ ಪ್ರಕಾರ 50 ಕೆ.ಜಿ. ಯುರೇನಿಯಂ ಅನ್ನು ಚೀನಾ ಪಾಕಿಸ್ತಾನಕ್ಕೆ ನೀಡಲಾಗಿತ್ತು ಎಂದು ಖಾನ್ ಬರೆದಿದ್ದರು.

## ಅಮೆರಿಕ: ಹಂದಿಜ್ವರಕ್ಕೆ 4000 ಬಲಿ

**ವಾಷಿಂಗ್ಟನ್:** ಜಗತ್ತನ್ನೇ ನಡುಗಿಸಿದ ಹಂದಿಜ್ವರಕ್ಕೆ ಅಮೆರಿಕದಲ್ಲಿ ಇದುವರೆಗೆ 4000 ಮಂದಿ ಬಲಿಯಾಗಿದ್ದಾರೆ. ರೋಗ ನಿಯಂತ್ರಣ ಮತ್ತು ರಕ್ಷಣೆಗಾಗಿನ ಕೇಂದ್ರ ಗುರುವಾರ ಈ ಮಾಹಿತಿ ಒದಗಿಸಿದ್ದು, ಅಮೆರಿಕದ 10 ರಾಜ್ಯಗಳಲ್ಲಿ 540 ಮಕ್ಕಳು ಹಂದಿಜ್ವರದಿಂದಾಗಿ ಮೃತಪಟ್ಟಿದ್ದಾರೆ.

## ‘ಜರ್ದಾರಿ ಲಂಚ ಪಡೆದದ್ದಕ್ಕೆ ಸಾಕ್ಷಿಯಿದೆ’



**ಲಾಹೋರ್:** ಪಾಕಿಸ್ತಾನ 1994ರಲ್ಲಿ ಫ್ರಾನ್ಸ್‌ನಿಂದ ಸಬ್‌ಮೆರೀನ್ ಖರೀದಿ ವೇಳೆ ಆಸಿಫ್ ಅಲಿ ಜರ್ದಾರಿ ಕೋಟ್ಯಂತರ ರು. ಲಂಚ ಪಡೆದದ್ದಕ್ಕೆ ಸಾಕ್ಷಿಯಿದೆ ಎಂದು ಫ್ರೆಂಚ್ ಪತ್ರಕರ್ತನೊಬ್ಬ ಹೇಳಿದ್ದಾನೆ. ಫ್ರಾನ್ಸ್‌ನ ಪ್ರಮುಖ ಪತ್ರಿಕೆ ‘ಲಿಬರೇಶನ್’ನ ಪತ್ರಕರ್ತ ಗಿಲೇಮಿ ಡಾಸ್ಕಿ ಖಾಸಗಿ ಸುದ್ದಿವಾಹಿನಿಗೆ ಈ ಹೇಳಿಕೆ ನೀಡಿದ್ದು, ಜರ್ದಾರಿ ಲಂಚ ಪಡೆದದ್ದಕ್ಕೆ ಲಂಡನ್ ಮತ್ತು ಸ್ವಿಜರ್ಲೆಂಡ್‌ನಿಂದ ದಾಖಲೆಗಳು ತನ್ನ ಪತ್ರಿಕೆಗೆ ಬಂದಿವೆ ಎಂದಿದ್ದಾನೆ. ಸಬ್‌ಮೆರೀನ್ ಖರೀದಿ ವೇಳೆ ಜರ್ದಾರಿ 21.32 ಕೋಟಿ ರು. ಲಂಚ ಪಡೆದಿದ್ದರು ಎಂದು ‘ಲಿಬರೇಶನ್’ ಇತ್ತೀಚೆಗಷ್ಟೇ ವರದಿ ಮಾಡಿತ್ತು.

### ತಮಾಷೆಯಲ್ಲ!

## ಬಯಲಲ್ಲೇ ಮೂತ್ರ ಮಾಡೋದು ಒಳ್ಳೇದು!

**ಲಂಡನ್:** ‘ಬಯಲೇ ಮೂತ್ರಾಲಯ’ –ಇದು ಬಹಳ ಹಿಂದಿನ ಕಾಲದಿಂದಲೇ ಬಳಕೆಯಲ್ಲಿದ್ದದ್ದು. ಇತ್ತೀಚೆಗೆ ಶೌಚಾಲಯಗಳು ಹೆಚ್ಚಿದರೂ, ಹಳ್ಳಿಗಳಲ್ಲಿ ಬಯಲಲ್ಲೇ ಮೂತ್ರ ವಿಸರ್ಜಿಸುವ ಪರಿಪಾಠವಿದೆ. ಬಯಲಲ್ಲಿ ಮೂತ್ರ ವಿಸರ್ಜಿಸುವವರು ಇನ್ನು ಖುಷಿ ಪಡಬಹುದು. ಏಕೆಂದರೆ, ಬಯಲಲ್ಲಿ ಮೂತ್ರ ವಿಸರ್ಜಿಸುವುದರಿಂದ ಪರಿಸರ ರಕ್ಷಣೆಯಾಗುತ್ತದೆ ಎನ್ನುತ್ತಿದೆ ಲಂಡನ್ನಿನ ಸಂಸ್ಥೆಯೊಂದು. ಕಾಂಪೋಸ್ಟ್ ಗುಂಡಿ ಅಥವಾ ಮರ–ಗಿಡಗಳ ಬುಡಕ್ಕೆ ಮೂತ್ರ ವಿಸರ್ಜಿಸುವುದರಿಂದ ಶೌಚಕ್ಕೆ ಬಳಸುವ ನೀರು, ಇಂಧನ ಉಳಿತಾಯವಾಗುತ್ತದೆ. ಅಷ್ಟೇ ಅಲ್ಲ, ಉತ್ತಮ ಗೊಬ್ಬರವೂ ಆಗುತ್ತದೆ. ಅದರಲ್ಲೂ ಪುರುಷರ ಮೂತ್ರ ಮಹಿಳೆಯರದ್ದಕ್ಕಿಂತ ಉತ್ತಮವಂತೆ. ಕಾರಣ– ಮಹಿಳೆಯರ ಮೂತ್ರದಲ್ಲಿ ಆ್ಯಸಿಡ್ ಅಂಶ ಹೆಚ್ಚಿರುತ್ತದೆ ಎನ್ನುತ್ತದೆ ಸಂಸ್ಥೆ. ‘ಬಯಲಲ್ಲೇ ಮೂತ್ರ ಮಾಡಿ’ ಎಂದು ಈ ಸಂಸ್ಥೆ ತನ್ನ ಪುರುಷ ಸಿಬ್ಬಂದಿಗೆ ಕಟ್ಟಪ್ಪಣೆ ಮಾಡಿದೆಯಂತೆ!

## ತೆರೇಸಾ ಹೆಸರಿನ ವಿಶ್ವದ ಮೊದಲ ಚರ್ಚ್ ಉದ್ಘಾಟನೆ

**ಕೋಲ್ಕತಾ:** 2010ರಲ್ಲಿ ನಡೆಯಲಿರುವ ಮದರ್ ತೆರೇಸಾ ಅವರ ಶತಾಬ್ದಿ ಅಂಗವಾಗಿ ಪಶ್ಚಿಮ ಬಂಗಾಳದ ಬರೂಪುರ್ ಎಂಬಲ್ಲಿ ನಿರ್ಮಿಸಲಾದ ವಿಶ್ವದ ಮೊದಲ ರೋಮನ್ ಕ್ಯಾಥೋಲಿಕ್ ಚರ್ಚ್ ಅನ್ನು ಗುರುವಾರ ಉದ್ಘಾಟಿಸಲಾಯಿತು. ಮಿಶನರೀಸ್ ಆಫ್ ಚಾರಿಟಿ ಸಂಸ್ಥೆಯ ಹಿರಿಯ ಸಿಸ್ಟರ್ ಪ್ರೇಮಾ ಚರ್ಚ್ ಉದ್ಘಾಟಿಸಿದರು. ಕೋಲ್ಕತ್ತಾದ ಆರ್ಚ್ ಬಿಷಪ್ ಲುಕಾಸ್ ಸಿರ್ಕಾರ್, ಬರೂಪುರ್‌ನ ಬಿಷಪ್ ಸಲ್ವಾದೋರ್ ಲೋಬೊ ಇದ್ದರು. ಚರ್ಚ್ ಆವರಣದಲ್ಲಿ ತೆರೇಸಾರ ಭಾವಚಿತ್ರ ಇರಿಸಲಾಗಿದ್ದು, ಶೀಘ್ರದಲ್ಲೇ ಅಲ್ಲಿ ಅವರ ಪ್ರತಿಮೆ ನಿರ್ಮಾಣ ಮಾಡಲಾಗುವುದು ಎಂದು ಲೋಬೊ ಹೇಳಿದ್ದಾರೆ.

## ಭೋಪಾಲ ವಿಷಾನಿಲ ದುರಂತ ಸ್ಥಳ ಸಾರ್ವಜನಿಕ ವೀಕ್ಷಣೆಗೆ

**ಭೋಪಾಲ:** 25 ವರ್ಷದ ಹಿಂದೆ ವಿಷಾನಿಲ ಸೋರಿಕೆಯಾಗಿ ಸಾವಿರಾರು ಜನರನ್ನು ಬಲಿ ತೆಗೆದುಕೊಂಡ ಭೋಪಾಲದ ಕಾರ್ಖಾನೆ ಇನ್ನು ಸಾರ್ವಜನಿಕ ವೀಕ್ಷಣೆಗೆ ಲಭ್ಯ. ದುರಂತಕ್ಕೆ 25 ವರ್ಷ ತುಂಬಿದ ಹಿನ್ನೆಲೆಯಲ್ಲಿ ಮಧ್ಯಪ್ರದೇಶ ಸರ್ಕಾರ ನ.20ರಿಂದ 1 ವಾರ ಕಾರ್ಖಾನೆ ವೀಕ್ಷಣೆಗೆ ಅವಕಾಶ ಕಲ್ಪಿಸಿದೆ. ಕಾರ್ಖಾನೆ ಪ್ರದೇಶ ತೊಂದರೆಯಿಂದ ಮುಕ್ತವಾಗಿದೆ ಎಂಬುದನ್ನು ಮನದಟ್ಟು ಮಾಡಲು ಈ ಕ್ರಮ ಕೈಗೊಳ್ಳಲಾಗಿದೆ ಎಂದು ರಾಜ್ಯ ಇಂಧನ ಸಚಿವ ಬಾಬುಲಾಲ್ ಗೌರ್ ಹೇಳಿದ್ದಾರೆ. ಏತನ್ಮಧ್ಯೆ, ಸರ್ಕಾರದ ಈ ನಿರ್ಧಾರವನ್ನು ನ್ಯಾಯಕ್ಕಾಗಿ ಅಂತಾರಾಷ್ಟ್ರೀಯ ಆಂದೋಲನದ ಭೋಪಾಲ್ ಪ್ರತಿನಿಧಿ ರಚನಾ ಧಿಂಗ್ರಾ ಟೀಕಿಸಿದ್ದಾರೆ.

## ವೈಷ್ಣೋದೇವಿ: ದಾಖಲೆಯ 74.21 ಲಕ್ಷ ಯಾತ್ರಿಗಳು

**ಜಮ್ಮು:** ಜಮ್ಮುವಿನ ಪ್ರಸಿದ್ಧ ಗುಹಾ ದೇವಾಲಯ ಮಾತಾ ವೈಷ್ಣೋದೇವಿ ಮಂದಿರಕ್ಕೆ ಈ ವರ್ಷ ದಾಖಲೆಯ 74,20,910 ಮಂದಿ ಭಕ್ತರು ಭೇಟಿ ನೀಡಿದ್ದಾರೆ. 2007ರಲ್ಲಿ 74,17,619 ಮಂದಿ ಭಕ್ತರು ವೈಷ್ಣೋದೇವಿಯ ದರ್ಶನ ಪಡೆದಿದ್ದರು. ಇದುವೇ ಈ ಹಿಂದಿನ ದಾಖಲೆಯಾಗಿತ್ತು. 2008ರಲ್ಲಿ 2 ತಿಂಗಳ ಕಾಲ ನಡೆದ ಅಮರನಾಥ ಭೂ ವಿವಾದದ ಪರಿಣಾಮ ವೈಷ್ಣೋದೇವಿ ದರ್ಶನಕ್ಕೆ ಆಗಮಿಸಿದ ಭಕ್ತರ ಸಂಖ್ಯೆ 67.92 ಲಕ್ಷಕ್ಕೆ ಇಳಿದಿತ್ತು. ಈ ವರ್ಷ ಇನ್ನೂ 48 ದಿನಗಳು ಬಾಕಿಯಿದ್ದು ದೇವಿಯ ದರ್ಶನಗೈಯುವ ಭಕ್ತರ ಸಂಖ್ಯೆ 80 ಲಕ್ಷ ದಾಟುವ ನಿರೀಕ್ಷೆ ಇದೆ ಎಂದು ದೇಗುಲದ ಅಧಿಕಾರಿಗಳು ಹೇಳುತ್ತಾರೆ.

## ಮುಂಬೈ ಭಾರತೀಯರೆಲ್ಲರಿಗೂ ಸೇರಿದ್ದು: ತೆಂಡೂಲ್ಕರ್



**ಮುಂಬೈ:** ವಾಣಿಜ್ಯ ನಗರಿ ಮುಂಬೈ ಭಾರತೀಯರೆಲ್ಲರಿಗೂ ಸೇರಿದ್ದು ಎನ್ನುವ ಮೂಲಕ ಮರಾಠಿ ಪರ ಹೋರಾಟದಲ್ಲಿ ನಿರತವಾಗಿರುವ ಶಿವಸೇನೆ ಹಾಗೂ ಮಹಾರಾಷ್ಟ್ರ ನವನಿರ್ಮಾಣ ಸೇನೆಗೆ ಖ್ಯಾತ ಕ್ರಿಕೆಟಿಗ ಸಚಿನ್ ತೆಂಡೂಲ್ಕರ್ ತಿರುಗೇಟು ನೀಡಿದ್ದಾರೆ. ಎಲ್ಲ ಭಾರತೀಯರಿಗೆ ಸೇರಿದ್ದರಿಂದಲೇ ಮುಂಬೈ ಚೆನ್ನಾಗಿ ಕಾಣುತ್ತಿದೆ. ನಾನೊಬ್ಬ ಮಹಾರಾಷ್ಟ್ರದವ. ಅದಕ್ಕೆ ನನಗೆ ಹೆಮ್ಮೆಯಿದೆ. ಆದರೆ, ಅದಕ್ಕೂ ಮೊದಲು ನಾನೊಬ್ಬ ಭಾರತೀಯ ಎಂದು ಸಚಿನ್ ಸುದ್ದಿಗಾರರಿಗೆ ತಿಳಿಸಿದರು.

**ಒನ್‌ಲೈನ್ ಸುದ್ದಿ: ಬಾಲ ಕಾಂಗ್ರೆಸ್‌ನ ರಾಷ್ಟ್ರೀಯ ಅಧ್ಯಕ್ಷ ಅಭಿಷೇಕ್ ಜೈಸ್ವಾಲ್ (14) ಬೆಂಕಿ ಆಕಸ್ಮಿಕದಿಂದಾಗಿ ಸಾವನ್ನಪ್ಪಿದ್ದಾನೆ.**

## ಗಡ್ಕರಿ ಬಿಜೆಪಿಯ ಹೊಸ ಅಧ್ಯಕ್ಷ?



**ನವದೆಹಲಿ:** ಮಹಾರಾಷ್ಟ್ರ ಬಿಜೆಪಿ ಅಧ್ಯಕ್ಷ ನಿತಿನ್ ಗಡ್ಕರಿ ಪಕ್ಷದ ರಾಷ್ಟ್ರಾಧ್ಯಕ್ಷರಾಗಲಿದ್ದಾರಂತೆ ಎಂಬ ಸುದ್ದಿ ಇದೀಗ ಹರಿದಾಡತೊಡಗಿದೆ.

ಇದಕ್ಕೆ ಇಂಬು ನೀಡುವಂತೆ ಗುರುವಾರ ಗಡ್ಕರಿ ದಿಲ್ಲಿಯಲ್ಲಿ ಕಾಣಿಸಿಕೊಂಡಿದ್ದಾರೆ. ಅಲ್ಲದೆ, ಪಕ್ಷ ಹೊರಿಸುವ ಯಾವುದೇ ಜವಾಬ್ದಾರಿ ಸ್ವೀಕರಿಸಲು ಸಿದ್ಧವಿರುವುದಾಗಿಯೂ ಹೇಳಿಕೊಂಡಿದ್ದಾರೆ.

ಅನಂತಕುಮಾರ್, ಅರುಣ್ ಜೇಟ್ಲಿ, ಸುಷ್ಮಾ ಸ್ವರಾಜ್, ವೆಂಕಯ್ಯ ನಾಯ್ಡುಗೆ ಅಧ್ಯಕ್ಷಗಿರಿ ಇಲ್ಲ ಎಂಬ ಸುದ್ದಿ ಇತ್ತೀಚೆಗೆ ಹೊರಬಿದ್ದಿತ್ತು. ಅಲ್ಲದೆ ಹೊಸ ಮುಖಕ್ಕೆ ಬಿಜೆಪಿ ಆದ್ಯತೆ ನೀಡಬೇಕು ಎಂದು ಆರೆಸ್ಸೆಸ್ ಈ ಹಿಂದೆಯೇ ಸಲಹೆ ಮಾಡಿತ್ತು. ಅದರಂತೆ ಗಡ್ಕರಿ ಹೆಸರು ಕೇಳಿಬರುತ್ತಿದೆ.

ಸದ್ಯ ನಾನು ಮಹಾರಾಷ್ಟ್ರಕ್ಕೆ ಸೀಮಿತ. ಪಕ್ಷದ ನಿಷ್ಠಾವಂತ ಸೈನಿಕ ಎಂದು ಗಡ್ಕರಿ ತಿಳಿಸಿದ್ದಾರೆ. ಇವರು ಎಬಿವಿಪಿ ಹಿನ್ನೆಲೆಯಿಂದ ಬಂದವರು.

## ಸುದ್ದಿ ಸಾಲು

- ದೆಹಲಿ ಮತ್ತು ನೋಯ್ಡಾ ನಡುವಿನ ಮೆಟ್ರೋ ರೈಲು ಮಾರ್ಗ ಸಾರ್ವಜನಿಕ ಸಂಚಾರಕ್ಕೆ ಶುಕ್ರವಾರ ತೆರವು
- ಉಸಿರಾಟದ ತೊಂದರೆ ಅನುಭವಿಸುತ್ತಿದ್ದ ಕೇರಳ ಮಾಜಿ ಸಿಎಂ ಕರುಣಾಕರನ್ ಆರೋಗ್ಯದಲ್ಲಿ ಸ್ವಲ್ಪ ಸುಧಾರಣೆ
- ಭಾರತ ಮತ್ತು ಬಾಂಗ್ಲಾದೇಶ ನಡುವೆ ಸಂಪರ್ಕ ಕಲ್ಪಿಸುವ ಸೇತುವೆಯೊಂದರ ನಿರ್ಮಾಣಕ್ಕೆ ಶುಕ್ರವಾರ ಅಡಿಗಲ್ಲು
- ರಾಷ್ಟ್ರಪತಿ ಪ್ರತಿಭಾ ಪಾಟೀಲ್ ದೇಹ ಸ್ಥಿತಿ ಸ್ಥಿರವಾಗಿದ್ದರೆ ಮಾತ್ರ ಸುಖೋಯ್ ಪ್ರಯಾಣ: ವಾಯುಪಡೆ ಮುಖ್ಯಸ್ಥ

## ಜಡ್ಜ್‌ಗಳ ಸಾರ್ವಜನಿಕ ವಿಚಾರಣೆ ಬೇಡ: ಸುಪ್ರೀಂ

**ನವದೆಹಲಿ:** ನ್ಯಾಯಾಧೀಶರನ್ನು ಸಾರ್ವಜನಿಕ ವಿಚಾರಣೆಗೆ ಒಳಪಡಿಸಬಾರದು. ಹಾಗೇನಾದರೂ ಮಾಡಿದರೆ ಜಡ್ಜ್‌ಗಳ ಕಾರ್ಯ ನಿರ್ವಹಣೆ ಹಾಗೂ ಸ್ವಾತಂತ್ರ್ಯಕ್ಕೆ ಧಕ್ಕೆಯಾಗುತ್ತದೆ ಎಂದು ದಿಲ್ಲಿ ಹೈಕೋರ್ಟ್‌ನಲ್ಲಿ ಸುಪ್ರೀಂ ಕೋರ್ಟ್ ವಾದಿಸಿದೆ. ಮುಖ್ಯ ನ್ಯಾಯಮೂರ್ತಿಗಳ ಕಚೇರಿಯೂ ಮಾಹಿತಿ ಹಕ್ಕು ಕಾಯ್ದೆ ವ್ಯಾಪ್ತಿಗೆ ಒಳಪಡುತ್ತದೆ ಎಂದು ಇತ್ತೀಚೆಗಷ್ಟೇ ದಿಲ್ಲಿ ಹೈಕೋರ್ಟ್ ತೀರ್ಪು ನೀಡಿತ್ತು. ಇದನ್ನು ಪ್ರಶ್ನಿಸಿರುವ ಸುಪ್ರೀಂ ಕೋರ್ಟ್ ರಿಜಿಸ್ಟ್ರಿ ಪರ ವಾದ ಮಾಡಿದ ಅಟಾರ್ನಿ ಜನರಲ್ ಜಿ.ಇ. ವಾಹನವಟಿ ಅವರು, ನ್ಯಾಯಾಂಗದಲ್ಲಿ ಇತರೆ ಸಂಸ್ಥೆಗಳು ಮೂಗು ತೂರಿಸುವುದಕ್ಕೆ ಅವಕಾಶ ಕೊಡಬಾರದು ಎಂದು ಹೇಳಿದರು. ಸಾರ್ವಜನಿಕರ ಭಾವನೆಗಳ ಆಧಾರದ ಮೇಲೆ ನ್ಯಾಯಾಧೀಶರನ್ನು ಅಳೆಯಬಾರದು. ನ್ಯಾಯಾಂಗವನ್ನು ಮೂರನೇ ವ್ಯಕ್ತಿಗೆ ಪ್ರದರ್ಶಿಸಬಾರದು ಎಂದು ಕೋರಿದರು.

## ಗೃಹ ಹಿಂಸೆ ವರದಿ...



*ನವದೆಹಲಿಯಲ್ಲಿ ಶುಕ್ರವಾರ ನಡೆದ ‘ಮಹಿಳೆಯರ ರಕ್ಷಣೆಗಾಗಿ ಗೃಹ ಹಿಂಸೆ ನಿಯಂತ್ರಣ ಕಾಯ್ದೆಯ ಅನುಷ್ಠಾನದ ಬಗೆಗಿನ ರಾಷ್ಟ್ರೀಯ ಸಮ್ಮೇಳನ’ದಲ್ಲಿ ರಾಷ್ಟ್ರಪತಿ ಪ್ರತಿಭಾ ಪಾಟೀಲ್ ಮತ್ತು ಕಾನೂನು ಸಚಿವ ಎಂ. ವೀರಪ್ಪ ಮೊಯ್ಲಿ ಅವರು ಗೃಹ ಹಿಂಸೆಯ ವರದಿಯನ್ನು ಬಿಡುಗಡೆ ಮಾಡಿದರು.*

## ನನ್ನ ಬದುಕಲ್ಲಿ ಬಂದ ಸ್ತ್ರೀಯರಿಗೆ ಜೀವನಗಾಥೆ ಅರ್ಪಣೆ: ಓಂಪುರಿ

**ನವದೆಹಲಿ:** ಮೊನ್ನೆಯಷ್ಟೇ ‘ಮನೆಗೆ ಹೋಗಿ ನನ್ನ ಹೆಂಡತಿಯನ್ನು ವಿಚಾರಿಸಿಕೊಳ್ಳುತ್ತೇನೆ’ ಎಂದಿದ್ದ ಬಾಲಿವುಡ್ ಖ್ಯಾತ ನಟ ಓಂ ಪುರಿ ಸಿಟ್ಟೀಗ ಮಾಧ್ಯಮಗಳ ಮೇಲೆ ತಿರುಗಿದೆ.

ಪತ್ನಿ ನಂದಿತಾ ಬರೆದಿರುವ ನನ್ನ ಜೀವನ ಚರಿತ್ರೆಯಲ್ಲಿನ ಕೆಲವೇ ವಿವಾದಾತ್ಮಕ ಅಂಶ ಮಾತ್ರ ವೈಭವೀಕರಿಸಿ ಬರೆದು, ನಾನು ಹೇಳದ್ದನ್ನೂ ನನ್ನ ಬಾಯಿಗೆ ಹಾಕಿ ಮಾಧ್ಯಮಗಳು ಪ್ರಕಟಿಸಿವೆ ಎಂದು ಅವರು ಕಿಡಿ ಕಾರಿದ್ದಾರೆ.

ಅದೇ ವೇಳೆ, ಜೀವನ ಚರಿತ್ರೆ ಬಿಡುಗಡೆಗೊಳ್ಳುವುದಕ್ಕೂ ಮುಂಚೆಯೇ ಅದನ್ನು ತಮ್ಮ ಬದುಕಿನಲ್ಲಿ ಬಂದು ಹೋದ ಮಹಿಳೆಯರಿಗೆ ಅರ್ಪಿಸಿ ಎಲ್ಲರ ಹುಬ್ಬೇರುವಂತೆ ಮಾಡಿದ್ದಾರೆ.

ಓಂ ಪುರಿ ಅವರ ಜೀವನ ಚರಿತ್ರೆಯನ್ನು ಅವರ ಪತ್ನಿ, ಪರ್ತಕರ್ತೆ ನಂದಿತಾ ಬರೆದಿದ್ದಾರೆ. ಈ ತಿಂಗಳಾಂತ್ಯದಲ್ಲಿ ಅದು ಬಿಡುಗಡೆಗೊಳ್ಳಲಿದೆ. ಕೆಲ ದಿನಗಳ ಹಿಂದಷ್ಟೇ ನಂದಿತಾ ಆ ಪುಸ್ತಕದಲ್ಲಿ ತಮ್ಮ ಪತಿ ಈ ಹಿಂದೆ ಹೊಂದಿದ್ದ ಅಕ್ರಮ ಸಂಬಂಧಗಳ ಬಗ್ಗೆ ಬರೆದಿರುವುದಾಗಿ ಹೇಳಿಕೊಂಡಿದ್ದರು. ಮನೆಗೆಲಸದ ಇಬ್ಬರು ಮಹಿಳೆಯರ ಜೊತೆ ಸುದೀರ್ಘ ಸಂಬಂಧ ಹೊಂದಿದ್ದರೂ ಅವರು ಹೇಗೆ ಅದು ಜಾಹೀರಾಗದಂತೆ ನೋಡಿಕೊಂಡರು ಎಂಬುದನ್ನು ತಿಳಿಸಿದ್ದರು.

ಅದನ್ನು ಕೇಳಿ ಸಿಟ್ಟಾಗಿದ್ದ ಓಂ ಪುರಿ ಪತ್ನಿಯ ಮೇಲೆ ಕಿಡಿ ಕಾರಿದ್ದರು. ಈಗ ಮಾಧ್ಯಮಗಳನ್ನು ದೂಷಿಸುವ ಮೂಲಕ ಉಲ್ಟಾ ಹೊಡೆದಿದ್ದಾರೆ. ಈ ಮಧ್ಯೆ, ‘ಅನ್‌ಲೈಕ್ಲಿ ಹೀರೋ: ಓಂ ಪುರಿ’ ಹೆಸರಿನ ಈ ಪುಸ್ತಕದಲ್ಲಿ ತಾವು ತಮ್ಮ ಪತಿಯ ಬದುಕಿನ ಮೂಲಕ ಭಾರತೀಯ ಸಿನಿಮಾದ ಇಡೀ ಯುಗವನ್ನು ಚಿತ್ರಿಸಲು ಪ್ರಯತ್ನಿಸಿದ್ದಾಗಿಯೂ, ಆದರೆ ಮಾಧ್ಯಮಗಳು ಅದನ್ನೊಂದು ಅಶ್ಲೀಲ ಪುಸ್ತಕದಂತೆ ಬಿಂಬಿಸಿದ್ದಾಗಿಯೂ ನಂದಿತಾ ಆರೋಪಿಸಿದ್ದಾರೆ.

## ಪೋಸ್ಟರಲ್ಲಿ ಬೆತ್ತಲಾದ ಕರೀನಾಗೆ ಸೀರೆ ಉಡಿಸಿದ ಶಿವಸೈನಿಕರು



**ಮುಂಬೈ:** ನಟಿ ಕರೀನಾ ಕಪೂರ್ ನಗ್ನ ಬೆನ್ನು ಪ್ರದರ್ಶಿಸುತ್ತಿರುವ ಚಿತ್ರವುಳ್ಳ ‘ಕುರ್ಬಾನ್’ ಚಿತ್ರದ ಪೋಸ್ಟರ್ ಬಗ್ಗೆ ಆಕ್ರೋಶಗೊಂಡ ಶಿವಸೈನಿಕರು, ಪೋಸ್ಟರ್‌ನಲ್ಲಿರುವ ಕರೀನಾ ಚಿತ್ರಕ್ಕೆ ಸೀರೆ ಉಡಿಸಿ ವಿಭಿನ್ನ ರೀತಿಯ ಪ್ರತಿಭಟನೆ ನಡೆಸಿದ್ದಾರೆ. ಕರೀನಾ ಮನೆಗೇ ಹೋಗಿ ಸೀರೆ ಅರ್ಪಿಸಲು ಮುಂದಾಗಿದ್ದಾರೆ.

‘ಕುರ್ಬಾನ್’ ಚಿತ್ರದಲ್ಲಿ ಕರೀನಾ, ಸೈಫ್ ಅಲಿ ಖಾನ್ ಅಭಿನಯಿಸುತ್ತಿದ್ದಾರೆ. ಸೈಫ್ ಎದೆ ತೋರಿಸುತ್ತಾ ನಿಂತಿರುವ, ಕರೀನಾ ಬೆನ್ನು ತೋರಿಸಿ ಸೈಫ್ ಹೆಗಲಿಗೆ ಕೈ ಹಾಕಿರುವ ಪೋಸ್ಟರ್ ರಾರಾಜಿಸುತ್ತಿವೆ. ಇದು ಹೆಂಗಸರು, ಮಕ್ಕಳ ಮೇಲೆ ಕೆಟ್ಟ ಪರಿಣಾಮ ಬೀರುತ್ತೆ ಎಂಬುದು ಶಿವಸೈನಿಕರ ಆತಂಕ.

## ಒಂದೊಂದು ದೇಶದಲ್ಲೊಂದೊಂದು ಮಕ್ಕಳ ದಿನ; ನಮ್ಮಲ್ಲಿ ಇಂದು

**ನವದೆಹಲಿ:** ಭಾರತೀಯರು ನ.14ರಂದು ಮಕ್ಕಳ ದಿನವನ್ನಾಚರಿಸುವುದು ಪಂಡಿತ್ ಜವಾಹರಲಾಲ್ ನೆಹರು ಅವರ ಹುಟ್ಟುಹಬ್ಬದ ಅಂಗವಾಗಿ. ಪ್ರಪಂಚದ ಬಹುತೇಕ ಎಲ್ಲಾ ರಾಷ್ಟ್ರಗಳಲ್ಲೂ ಮಕ್ಕಳ ದಿನ ಆಚರಿಸಲಾಗುತ್ತದೆ. ಆದರೆ, ದಿನಾಂಕ ಬೇರೆ ಬೇರೆ.

ಮಕ್ಕಳ ದಿನಾಚರಣೆ ಮೊದಲು ಆರಂಭವಾಗಿದ್ದು ಟರ್ಕಿಯಲ್ಲಿ, 1920ರ ಜ.1ಕ್ಕೆ. ನಂತರ 1954ರಲ್ಲಿ ವಿಶ್ವಸಂಸ್ಥೆ ಸಾಮಾನ್ಯ ಸಭೆ ಎಲ್ಲಾ ದೇಶಗಳೂ ಒಂದು ದಿನವನ್ನು ಮಕ್ಕಳಿಗೆ ಮೀಸಲಿಟ್ಟು ಸಂಭ್ರಮದಿಂದ ಆಚರಿಸಬೇಕು ಎಂದು ನಿರ್ದೇಶಿಸಿತು.

ವಿಶ್ವಸಂಸ್ಥೆ ಸೂಚಿಸಿದ ಮಕ್ಕಳ ದಿನದ ಉದ್ದೇಶ ವಿಶ್ವ ಭ್ರಾತೃತ್ವ ಸಾರುವುದು, ಮಕ್ಕಳ ಕಲ್ಯಾಣ ಉತ್ತೇಜಿಸುವ ಕಾರ್ಯಕ್ರಮ ಹಮ್ಮಿಕೊಳ್ಳುವುದು. ಅದರ ಪ್ರಕಾರ ಅಂತಾರಾಷ್ಟ್ರೀಯ ಮಕ್ಕಳ ದಿನ ನ.20. ಜಪಾನ್‌ನಲ್ಲಿ ಮಕ್ಕಳ ದಿನಕ್ಕೆ ಕೊಡೊಮೊ ಎಂದು ಹೆಸರು. ಈ ದಿನ ತಾಯಂದಿರು ಮಕ್ಕಳಿಗಾಗಿ ಅಕ್ಕಿಯ ವಿಶೇಷ ತಿನಿಸು ತಯಾರಿಸುತ್ತಾರೆ. ಮೆಕ್ಸಿಕೋದಲ್ಲಿ ಎಲ್ ದಿಯಾ ದೆಲ್ ನಿನೋ ಎನ್ನುತ್ತಾರೆ. ಅಲ್ಲಿ ಈ ದಿನ ಮಕ್ಕಳಿಗೆ ಶಾಲೆಗಳಲ್ಲೇ ಊಟವಿರುತ್ತದೆ.

| ಎಲ್ಲಿ, ಯಾವಾಗ? | |
|---|---|
| ಪಾಕಿಸ್ತಾನ | ನವೆಂಬರ್ 20 |
| ಬ್ರಿಟನ್ | ಅಗಸ್ಟ್ 30 |
| ಚೀನಾ | ಜೂನ್ 1 |
| ಜಪಾನ್ | ಮೇ 5 |
| ಅಮೆರಿಕ | ಜೂನ್ 1ನೇ ಭಾನುವಾರ |
| ಆಸ್ಟ್ರೇಲಿಯಾ | ಜುಲೈ 1ನೇ ಭಾನುವಾರ |
| ಜರ್ಮನಿ | ಜೂನ್ 1 |
| ಮೆಕ್ಸಿಕೋ | ಏಪ್ರಿಲ್ 30 |
| ಸಿಂಗಾಪುರ | ಅಕ್ಟೋಬರ್ 1 |



**ಹೂಗಳಲ್ಲಿ ಅರಳಿದ ಚಾಚಾ...** *ಮಕ್ಕಳ ದಿನಾಚರಣೆ ಹಿನ್ನೆಲೆಯಲ್ಲಿ ಶುಕ್ರವಾರ ಭುವನೇಶ್ವರದ ಪೋಖರಿಪತ್‌ನ ಶಾಲೆಯೊಂದರಲ್ಲಿ ಮಕ್ಕಳು ಹೂಗಳಲ್ಲೇ ಪಂಡಿತ್ ಜವಹರಲಾಲ್ ನೆಹರು ಅವರ ಚಿತ್ರ ಬಿಡಿಸಿ ಗೌರವ ಸಲ್ಲಿಸಿದರು.*

## ಹಿಮಗಿರಿಯಿಂದ ನಡೆದು ಬಂದು ರಾಮೇಶ್ವರದಲ್ಲಿ ಪ್ರಾಣಬಿಟ್ಟ ಶಿವಭಕ್ತ

**ಪಿಟಿಐ, ರಾಮನಾಥಪುರಂ, ನ.13**

ಈತ ಹೊರಟಿದ್ದು ಶಿವ ಸನ್ನಿಧಿಗೆ. ಕೊನೆಯಲ್ಲಿ ಸೇರಿದ್ದೂ ಶಿವನ ಪಾದವನ್ನೇ!

ಆಸ್ತಿಕರು ಅಚ್ಚರಿಪಡುವ ದುರಂತ ಸಾವು ಆತನದು.

ಹಿಮಾಲಯದ ತುದಿಯಿಂದ ಹೊಟ ಶಿವ ಭಕ್ತನೊಬ್ಬ ದೇಶದ ಮತ್ತೊಂದು ತುತ್ತ ತುದಿಯಲ್ಲಿರುವ ರಾಮೇಶ್ವರದಲ್ಲಿ ಶುಕ್ರವಾರ ಸಾವನ್ನಪ್ಪಿದ್ದಾನೆ. ಆತನ ಹೆಸರು ಶ್ರೀ ಗುರುಮಹಾರಾಜ್ ಬದ್ರಿ. ಹಿಮಾಲಯದಿಂದ ಗಂಗಾಜಲ ಹಿಡಿದು ಅದನ್ನು ರಾಮನಾಥಸ್ವಾಮಿಗೆ ಅಭಿಷೇಕ ಮಾಡಲೆಂದು ಕಾಲ್ನಡಿಗೆಯಲ್ಲೇ ರಾಮೇಶ್ವರಕ್ಕೆ ಹೊರಟಿದ್ದ. ತನ್ನಿಚ್ಛೆಯಂತೆ ರಾಮೇಶ್ವರವನ್ನು ತಲುಪಿಯೂಬಿಟ್ಟ. ಆದರೆ, ವಿಧಿ ಅವನನ್ನು ಬರಸೆಳೆಯಿತು. ಬಸ್ಸಿನ ಚಕ್ರಕ್ಕೆ ಸಿಲುಕಿ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದ. ರಾಮೇಶ್ವರನಿಗೆ ಗಂಗಾಜಲ ಅಭಿಷೇಕ ಮಾಡಬೇಕೆಂಬ ಬದ್ರಿಯ ಬಯಕೆ ಕೊನೆಗೂ ಕೈಗೂಡಲಿಲ್ಲ.

## ತನಿಖೆ ನಡೆಸಲು ಬಂದ ಅಧಿಕಾರಿಗಳಿಗೇ ಕೈಕೊಟ್ಟ ಜಾರ್ಖಂಡ್ ಮಾಜಿ ಸಿಎಂ

**ರಾಂಚಿ/ಜಮ್ಷೆಡ್‌ಪುರ:** 2500 ಕೋಟಿ ರು. ಹವಾಲಾ ಹಗರಣವೊಂದರ ಪ್ರಮುಖ ಆರೋಪಿ ಜಾರ್ಖಂಡ್ ಮಾಜಿ ಸಿಎಂ ಮಧು ಕೋಡಾ ಶುಕ್ರವಾರ ಆದಾಯ ತೆರಿಗೆಯ ತನಿಖಾಧಿಕಾರಿಗಳಿಗೆ ಚಳ್ಳೆಹಣ್ಣು ತಿನ್ನಿಸಿದ ಘಟನೆ ವರದಿಯಾಗಿದೆ.

ತನಗೆ ವಿಶ್ರಾಂತಿ ಬೇಕಾಗಿದೆ, ತಾವು ಮಧ್ಯಾಹ್ನ ಬನ್ನಿ ಎಂದು ಕೋಡಾ ಅವರು ತನಿಖಾಧಿಕಾಗಳಲ್ಲಿ ಕೇಳಿಕೊಂಡಿದ್ದರು. ಅದರಂತೆ ಅಧಿಕಾರಿಗಳು ಮಧ್ಯಾಹ್ನ ಮನೆಗೆ ಹೋದಾಗ ಅಲ್ಲಿ ಮಧು ಕೋಡಾ ಅವರೇ ಇರಲಿಲ್ಲ.

■ **ತನಿಖಾಧಿಕಾರಿ ಪುತ್ರನಿಗೆ ಥಳಿತ:** ಪ್ರಕರಣದ ತನಿಖೆ ನಡೆಸುತ್ತಿರುವ ಆದಾಯ ತೆರಿಗೆ ಅಧಿಕಾರಿ ಎ.ಕೆ.ಮಿಶ್ರಾ ಅವರ ಪುತ್ರ ಅಭಿಷೇಕ್ ಮೇಲೆ ಜಮ್ಷೆಡ್‌ಪುರದಲ್ಲಿ ಹಲ್ಲೆ ನಡೆದಿದೆ. ತನಿಖಾಧಿಕಾರಿಯ ಮೇಲೆ ಒತ್ತಡ ಹೇರಲು ಕೋಡಾ ಬೆಂಬಲಿಗರು ಈ ಕೃತ್ಯ ಎಸಗಿರುವ ಶಂಕೆಯಿದೆ.

**● ಅಮೆರಿಕದಲ್ಲಿ ಸೆರೆ ಸಿಕ್ಕ ಉಗ್ರ ಜೋಡಿಯಿಂದ ಸ್ಫೋಟಕ ಮಾಹಿತಿ ● ಮುಂಬೈ ಸ್ಫೋಟಕ್ಕೂ ನಂಟು ● ರಾಣಾ ಜೊತೆ ಸೇರಿ ವಿವಿಧ ದೇಶಗಳಲ್ಲಿ ಬಾಂಬಿಡಲು ಸಂಚು ●**

# ಹೆಡ್ಲಿಯ ಡೆಡ್ಲಿ ಭಯೋತ್ಪಾದನೆ ಸಂಚು

**ನವದೆಹಲಿ:** ಡೇವಿಡ್ ಕೋಲ್ಮನ್ ಹೆಡ್ಲಿ.

ಭಯೋತ್ಪಾದನೆಗೆ ಅಷ್ಟೇನೂ ಹೊಂದದ ಹೆಸರಿನಂತೆ ಕಾಣುವ ಈ ಉಗ್ರನ ಒಂದೊಂದೇ ಭಯಾನಕ ಅವತಾರ ಹಾಗೂ ಆತ ಭಾರತದಲ್ಲಿ ನಡೆಸಲುದ್ದೇಶಿಸಿದ್ದ ಭಯೋತ್ಪಾದಕ ಚಟುವಟಿಕೆಗಳ ಸ್ಫೋಟಕ ಮಾಹಿತಿ ಅಮೆರಿಕದ ಎಫ್‌ಬಿಐ ವಿಚಾರಣೆಯಿಂದ ಹೊರಬೀಳುತ್ತಿದೆ.

2006– 2009ರ ನಡುವೆ ಭಾರತಕ್ಕೆ ಹೆಡ್ಲಿ 9 ಬಾರಿ ಭೇಟಿ ನೀಡಿದ್ದೇಕೆ, 26/11 ಮುಂಬೈ ಸ್ಫೋಟಕ್ಕೂ ಅವನಿಗೂ ಇರುವ ನಂಟೇನು, ಲಷ್ಕರ್ ಎ ತೊಯ್ಬಾ ಸಂಘಟನೆಯಷ್ಟೇ ಅಲ್ಲದೆ ಪ್ರಪಂಚದ ಬಹುತೇಕ ಕುಖ್ಯಾತ ಉಗ್ರಗಾಮಿ ಕೂಟಗಳ ಜೊತೆಗೆ ಅವನಿಗಿದ್ದ ಸಂಬಂಧ, ಅವನ ಪಾಕಿಸ್ತಾನಿ ಮೂಲ ಸೇರಿದಂತೆ ಬೆಚ್ಚಿಬೀಳುವಷ್ಟು ಮಾಹಿತಿಯನ್ನು ಎಫ್‌ಬಿಐ ಅಧಿಕಾರಿಗಳು ಕಲೆಹಾಕಿದ್ದಾರೆ.

ಅ.18ರಂದು ಶಿಕಾಗೋದ ಓ’ಹಾರೇ ವಿಮಾನನಿಲ್ದಾಣದಲ್ಲಿ ಫಿಲೆಡೆಲ್ಫಿಯಾ ಮೂಲಕ ಪಾಕಿಗೆ ಹಾರಲು ಸಿದ್ಧವಾಗುತ್ತಿದ್ದಾಗ ಎಫ್‌ಬಿಐ ಅಧಿಕಾರಿಗಳು ಹೆಡ್ಲಿಯನ್ನು ಬಂಧಿಸಿದ್ದರು. ನಂತರ ಅವನೊಂದಿಗೆ ಸಂಬಂಧವಿರಿಸಿಕೊಂಡಿದ್ದ ಮತ್ತೊಬ್ಬ ಉಗ್ರ ತಹವ್ವುರ್ ಹುಸೇನ್ ರಾಣಾನನ್ನೂ ಸ್ವಲ್ಪ ಸಮಯದಲ್ಲೇ ಸೆರೆ ಹಿಡಿದಿದ್ದರು.



ಈಗ ವಿಚಾರಣೆಯ ನಂತರ ತನಿಖಾಧಿಕಾರಿಗಳು ರಾಣಾ ವಿರುದ್ಧ ನ್ಯಾಯಾಲಯಕ್ಕೆ ಅಫಿಡವಿಟ್ ಸಲ್ಲಿಸಿದ್ದಾರೆ. ಅದರಲ್ಲಿ ಹೆಡ್ಲಿ ಜೊತೆ ಸೇರಿ ಅವನು ಭಾರತದಲ್ಲಿ ಕೈಗೊಳ್ಳಲುದ್ದೇಶಿಸಿದ್ದ ದಾಳಿಗಳ ವಿವರಗಳೂ ಇವೆ.

■ **ಇಬ್ಬರ ಮೂಲವೂ ಪಾಕ್:** ತಹವ್ವುರ್ ರಾಣಾ ಪಾಕ್‌ನಲ್ಲಿ ಜನಿಸಿ ಕೆನಡಾಕ್ಕೆ ತೆರಳಿ ಅಲ್ಲಿನ ನಾಗರಿಕತ್ವ ಪಡೆದಿದ್ದ ಎಂಬುದು ಈ ಹಿಂದೆ ಗೊತ್ತಾಗಿತ್ತು. ಆದರೆ, ಅಮೆರಿಕದ ಪ್ರಜೆಯೆಂದೇ ಭಾವಿಸಲಾಗಿದ್ದ ಹೆಡ್ಲಿಯ ಮೂಲವೂ ಪಾಕಿಸ್ತಾನ ಎಂಬುದೀಗ ಬೆಳಕಿಗೆ ಬಂದಿದೆ.

ಅವನ ಮೂಲ ಹೆಸರು ದಾವೂದ್ ಗಿಲಾನಿ. ಅಮೆರಿಕಕ್ಕೆ ತೆರಳಿದ ನಂತರ ಡೇವಿಡ್ ಕೋಲೆಮನ್ ಹೆಡ್ಲಿ ಎಂದು ಹೆಸರು ಬದಲಿಸಿಕೊಂಡಿದ್ದ. ಅವನ ಬಳಿ ಅಮೆರಿಕ, ಪಾಕಿಸ್ತಾನ ಹಾಗೂ ಭಾರತ ಮೂರೂ ದೇಶಗಳ ಪಾಸ್ ಪೋರ್ಟ್‌ಗಳಿವೆ.

ಹೆಡ್ಲಿ ಮುಂಬೈನಲ್ಲಿ 2008ರವರೆಗೆ ವೀಸಾ ಏಜೆನ್ಸಿಯನ್ನೂ ನಡೆಸುತ್ತಿದ್ದ.

■ **ಸ್ಫೋಟಕ್ಕೂ ಮುನ್ನ ಪಲಾಯನ:** ಲಷ್ಕರ್ ಎ ತೊಯ್ಬಾ (ಮುಂಬೈ ದಾಳಿ ನಡೆಸಿದ ಸಂಘಟನೆ) ಸಂಘಟನೆಗೆ ಸೇರಿದ ನಂತರ ಹೆಡ್ಲಿ 2006ರಲ್ಲಿ ಭಾರತದ ಪಾಸ್ ಪೋರ್ಟ್ ಪಡೆದಿದ್ದ. 2008ರ ನವೆಂಬರ್ 26ರ ಮುಂಬೈ ಸ್ಫೋಟಕ್ಕೆ 1 ವಾರದ ಹಿಂದಿನವರೆಗೂ ಹೆಡ್ಲಿ, ರಾಣಾ ಮುಂಬೈನಲ್ಲೇ ಇದ್ದರು. ನಂತರ ಕಾಲ್ಕಿತ್ತಿದ್ದರು.

■ **ಹಸ್ತಾಂತರಕ್ಕೆ ಮನವಿ:** ಅಮೆರಿಕದಲ್ಲಿರುವ ಹೆಡ್ಲಿ ಹಾಗೂ ರಾಣಾನನ್ನು ಭಾರತಕ್ಕೆ ಹಸ್ತಾಂತರಿಸುವಂತೆ ಕೇಂದ್ರ ಸರ್ಕಾರ ಸದ್ಯದಲ್ಲೇ ಮನವಿ ಕಳುಹಿಸಲಿದೆ.

■ **ಮುಂಬೈ ದಾಳಿಗೆ ಇವನದೇ ಪ್ಲಾನ್?:** 26/11 ಮುಂಬೈ ಸ್ಫೋಟದ ಸಂಪೂರ್ಣ ಸಂಚು ರೂಪಿಸಿದ್ದೇ ಹೆಡ್ಲಿ ಎಂಬ ಶಂಕೆಯೂ ಇದೆ. ಈತ ಲಷ್ಕರ್ ಉಗ್ರರೊಂದಿಗೆ ಸೇರಿ ಈ ಸಂಚು ರೂಪಿಸಿದ್ದ. ದಾಳಿಗೆ ತೆರಳುವ ಪ್ರತಿ ಉಗ್ರನೂ ಯಾವ ದಿಕ್ಕಿನಲ್ಲಿ ಹೋಗಬೇಕು, ಎಲ್ಲಿ ದಾಳಿ ಆರಂಭಿಸಬೇಕು ಎಂಬುದನ್ನು ಪಕ್ಕಾ ಸ್ಕೆಚ್ ಹಾಕಿದ್ದ ಎನ್ನಲಾಗಿದೆ. ಇದಲ್ಲದೆ, ಡೆನ್ಮಾರ್ಕ್ ಹಾಗೂ ಇನ್ನೂ ಹಲವು ದೇಶಗಳಲ್ಲಿ ಬಾಂಬ್ ಸ್ಫೋಟಿಸಲು ಹೆಡ್ಲಿ ಹಾಗೂ ರಾಣಾ ಸಂಚು ನಡೆಸಿದ್ದರು ಎಂದೂ ಗೊತ್ತಾಗಿದೆ. ಡೆನ್ಮಾರ್ಕ್ ಕಾರ್ಯಾಚರಣೆಗೆ ಅವರಿಟ್ಟ ಹೆಸರು ‘ಮಿಕ್ಕಿ ಮೌಸ್ ಪ್ರಾಜೆಕ್ಟ್.’

ದೆಹಲಿಯಲ್ಲಿ ಕಳೆದ ವರ್ಷ ಸಂಭವಿಸಿದ ಸರಣಿ ಬಾಂಬ್ ಸ್ಫೋಟದ ರೂವಾರಿಯಾದ ಇಂಡಿಯನ್ ಮುಜಾಹಿದ್ದೀನ್ ಸಂಘಟನೆ ಹಾಗೂ ಭಾರತದಲ್ಲಿ ಸಕ್ರಿಯವಾಗಿರುವ ಹರ್ಕತ್ ಉಲ್ ಜಿಹಾದಿ ಇಸ್ಲಾಮಿಯಾ (ಹುಜಿ) ಜೊತೆಗೂ ಹೆಡ್ಲಿಯ ಸಂಪರ್ಕವಿತ್ತೆಂಬುದಕ್ಕೆ ಸಾಕ್ಷ್ಯ ಸಿಕ್ಕಿದೆ.

## ಹೆಡ್ಲಿ ಗೆಳೆಯ ರಾಹುಲ್ ಮಹೇಶ್ ಭಟ್ ಮಗ



**ನವದೆಹಲಿ:** ಡೇವಿಡ್ ಹೆಡ್ಲಿಯ ಇ–ಮೇಲ್‌ಗಳಲ್ಲಿ ಆಗಾಗ ಕಾಣಿಸಿಕೊಂಡಿದ್ದ ಹೆಸರು ರಾಹುಲ್. ಈ ರಾಹುಲ್ ಯಾರು ಎಂಬ ಕುತೂಹಲಕ್ಕೆ ಈಗ ತೆರೆ ಬಿದ್ದಿದೆ. ಅದು ಬಾಲಿವುಡ್‌ನ ಖ್ಯಾತ ನಿರ್ಮಾಪಕ, ನಿರ್ದೇಶಕ ಮಹೇಶ್ ಭಟ್ ಮಗ ರಾಹುಲ್ ಭಟ್. ರಾಹುಲ್ ಹೆಸರಿನ ಸುತ್ತ ರಾಹುಲ್ ಗಾಂಧಿಯ ಹೆಸರೂ ಗಿರಕಿ ಹೊಡೆದಿದ್ದುಂಟು. ಅದೀಗ ಮಹೇಶ್ ಭಟ್ ಅವರ ಪುತ್ರ ಎಂಬುದನ್ನು ತನಿಖಾಧಿಕಾರಿಗಳು ಪತ್ತೆಹಚ್ಚಿ ಆತನ ವಿಚಾರಣೆಯನ್ನೂ ನಡೆಸಿದ್ದಾರೆ. ವಿಚಾರಣೆ ವೇಳೆ 25 ವರ್ಷದ ರಾಹುಲ್ ತನಗೆ ಹೆಡ್ಲಿಯ ಸ್ನೇಹ ಇತ್ತೆಂದೂ, ಆದರೆ ಆತನ ಭಯೋತ್ಪಾದನೆ ನಂಟಿನ ಬಗ್ಗೆ ಗೊತ್ತಿಲ್ಲವೆಂದೂ ಹೇಳಿದ್ದಾನೆ ಎಂದು ತಿಳಿದು ಬಂದಿದೆ. ರಾಹುಲ್‌ಗೆ ತನಿಖಾಧಿಕಾರಿಗಳು ಇನ್ನೂ ಕ್ಲೀನ್‌ಚಿಟ್ ನೀಡಿಲ್ಲ. ರಾಹುಲ್‌ಗೆ ಜಿಮ್ ಒಂದರಲ್ಲಿ ಹೆಡ್ಲಿಯ ಪರಿಚಯವಾಗಿ ಸ್ನೇಹ ಬೆಳೆದಿತ್ತು. ನಂತರ ಅವನೇ ಹೆಡ್ಲಿಗೆ ಮುಂಬೈನಲ್ಲಿ ಮನೆ ಕೊಡಿಸಿದ್ದ ಎಂದು ಗೊತ್ತಾಗಿದೆ.